ಪ್ರತಿಯೊಂದು ಸಂಬಂಧಗಳು ಒಂದಿಷ್ಟು ಬಲವಾದ ಕಾರಣಗಳಿಂದ ಚಿಗುರೊಡೆದಿರುತ್ತವೆ. ಕೆಲವು ಸಂಬಂಧಗಳು ಮಾತ್ರ ಹೇಳಿಕೊಳ್ಳುವಂತಹ ನೆವವಿಲ್ಲದೆ ಹೆಮ್ಮರವಾಗಿ ಬೆಳೆದಿರುತ್ತವೆ. ಕುಳಿತು ಯೋಚಿಸಿದರೂ ಹುಡುಕ ಲಾಗದಂತಹ ಬಂಧವದು. ಆದರೆ ಈ ಎಲ್ಲ, ತನ್ನಿಂದತಾನೇ ಹುಟ್ಟಿಕೊಂಡ ಅಥವಾ ಸ್ವಯಾರ್ಜಿತವಾಗಿ ಗಳಿಸಿದ ಸಂಬಂಧಗಳನ್ನು ಕಂಡೂ ಕಾಣದ ಬೆಚ್ಚಗಿನ ಭಾವವೊಂದು ಬಿಸಿಲುಕೋಲಿನಂತೆ ಕಾಯುತ್ತಿರುತ್ತದೆ. ಯಾವುದದು ಆ ಭಾವ? ಸಮಯ ಮಾಡಿಕೊಂಡು, ಸಂಯಮದಿಂದ ಹುಡುಕಿದರೆ, ಆತ್ಮೀಯತೆಯನ್ನು ಬೆಸೆಯುವ ಆ ಭಾವವನ್ನು ಗುರುತಿಸಬಹುದೇನೊ?

ಒಂದಿಷ್ಟು ವ್ಯಾಖ್ಯಾನಿಸಬಹುದಾದದ್ದು ಎಂದರೆ ಆತ್ಮಬಂಧು ಎಂಬ ಭಾವನೆ. ಅದು ತಂದೆ, ತಾಯಿ, ಗೆಳೆಯ, ಗೆಳತಿ, ಗಂಡ, ಹೆಂಡತಿ, ಟೀಚರ್ ಹೀಗೆ ಯಾವುದೇ ವ್ಯಕ್ತಿಯೊಂದಿಗೆ ಅವಿನಾಭಾವವಾಗಿ ಬೆಸೆಯುವುದು ಇರಬಹುದು. ಅದಕ್ಕೆ ಮೂಲ ಕಾರಣವೇನು? ಮಾತು, ಪ್ರೀತಿ, ಕೇಳಿಸಿಕೊಳ್ಳುವ ಗುಣ, ಕಡೆತನಕ ಉಳಿಸಿಕೊಳ್ಳಬೇಕು ಎಂಬ ಕಾಳಜಿ, ಯಾರ ಬಳಿಯೂ ಹೊಂದದ ಸಮಾನತೆಯ ಭಾವ, ಸಹಾಯ, ತಿದ್ದುವ ಸಲುಗೆ, ಎಂದಿಗೂ ಕುಂದದ ಪರಸ್ಪರ ವ್ಯಕ್ತಿ ಗೌರವ...? ಈ ಎಲ್ಲವೂ ಇರಬಹುದು; ಅಥವಾ ಯಾವುದಾದರೂ ಒಂದು ಇರಬಹುದು.

ಇನ್ನು ಅಮ್ಮನೊಂದಿಗೆ ಮುನಿಸಿಕೊಳ್ಳಲು ಇರುವ ಏಕಮಾತ್ರ ಕಂಫರ್ಟ್ ಅಂದರೆ she is granted! ಒಂದು ರೀತಿಯಲ್ಲಿ ಅದು ಸಸಾರವೇ. ನನ್ನಮ್ಮ ಮತ್ತು ಅವಳದೇ ರಕ್ತ .. ಮತ್ತೆ ಒಂದಾಗುತ್ತೇವೆ ಎನ್ನುವ ಧೈರ್ಯ ಕೂಡ.

ಅಪ್ಪನೊಂದಿಗೆ ಬರುವ ಅಧಿಕಾರಯುತ ಸಲುಗೆಗಳು ಇನ್ನೊಬ್ಬರಲ್ಲಿ ಕಾಣಲಾಗದು. ಅಪ್ಪ ಉಟ್ಟ ಪ್ಯಾಂಟ್ ಶರ್ಟ್ ಮೇಲೆಯೂ ಲೇವಡಿಯ ಕಾಮೆಂಟ್ ಮಾಡುವುದು.. ಇನ್ನಾರ ಜತೆ ಸಾಧ್ಯ ಹೇಳಿ? ಅಮ್ಮನೊಂದಿಗೆ ಮುನಿಸದಿದ್ದರೆ, ಅಪ್ಪನ ಡ್ರೆಸ್ ಸೆನ್ಸ್ ಬಗ್ಗೆ ಟೀಕಿಸದಿದ್ದರೆ, ಗೆಳೆಯನ ಬ್ರೇಕ್ ಅಪ್‌ಗಳ ಲೆಕ್ಕವಿಲ್ಲದಿದ್ದರೆ 'ಆ' ಮೂಲವನ್ನು ಮರೆತಂತೆಯೇ.

ನಾವು ನಮ್ಮೊಳಗೇ ಹಾಕಿಕೊಳ್ಳುವ ಚೌಕಟ್ಟಿನಿಂದಲೇ ಉಸಿರುಗಟ್ಟುವಂತೆ ಬದುಕುತ್ತಿದ್ದೇವೆ. ನಮ್ಮ ಜೀವನ ತೆರೆದ ಪುಸ್ತಕವೆಂದು ಹೇಳಿ, ಏನೂ ಬರೆಯದ ಖಾಲಿ ಹಾಳೆಯನ್ನಷ್ಟೇ ಬಿಟ್ಟಿರುತ್ತೇವೆ. ಯಾಕೆ ಹೀಗೆ? ಪ್ರತಿಯೊಂದು ಆತ್ಮೀಯತೆಯ ಬಂಧಕ್ಕೂ ಅದರದ್ದೇ ಆದ ಖದರ್, ಅಧಿಕೃತತೆಗಳಿರುತ್ತವೆ. ಅವನ್ನು ಅದರಷ್ಟಕ್ಕೇ ಬೆಳೆಯಲು ಬಿಡುವುದು ಒಳ್ಳೆಯ ಆಯ್ಕೆ. ಆದರೆ ನಾವು ಅವುಗಳನ್ನು ಕಿಚಡಿ ಮಾಡಿ, ಆಮೇಲೆ ಹುಳಿ, ಉಪ್ಪು, ಖಾರ, ಸಿಹಿ ಇಲ್ಲವೆಂದು ಗೊಣಗುತ್ತೇವೆ. ಪ್ರತಿಯೊಂದು ಸಂಬಂಧಗಳನ್ನೂ ವಿಭಾಗಿಸಿಕೊಳ್ಳಬೇಕು; ಅದರ ಅಗತ್ಯತೆಗಳನ್ನು ಕೂಡಾ.

ನಮ್ಮೊಳಗಿನ ಹಲವಾರು ಗೊಂದಲ ಹಾಗೂ ಕಾಡುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಹುಡುಕುವ 'ವೇ ಔಟ್' ಗಳು ಕೆಲವೊಮ್ಮೆ ಸಹಾಯಕ ವಾಗಬಹುದು. ಆದರೂ ಅದು ಕ್ಷಣಿಕ. ಉದಾಹರಣೆಗೆ: ನೆಚ್ಚಿನ ಟಿವಿ ಸೀರಿಯಲ್‌ಗಳು, ಒಂದಿಷ್ಟು ಜನ ವರ್ಷಕ್ಕೆ 2 ಬಾರಿ ಮಾತ್ರ ಸಿಗುವುದು, ಮನಸಾರೆ ಮಾತನಾಡುವುದು, ಗುಂಪಾಗಿ ಪ್ರವಾಸ ಹೋಗುವುದು, ಶಾಲೆಯ ಮೀಟಿಂಗ್‌ಗಳಲ್ಲಿ ಮಾತ್ರ ಸೇರುವುದು.. ಹೀಗೆ ಹಲವು ದಾರಿಗಳು. ಇಲ್ಲಿ ಎಲ್ಲರೂ ಮನಸ್ಸನ್ನು ತಟ್ಟಬೇಕಾಗಿಲ್ಲ, ಅವರಿಗಾಗಿ ಮನಸ್ಸಿನಲ್ಲೊಂದು ಜಾಗ ಕಾಯ್ದಿರಿಸಬೇಕಾಗಿಲ್ಲ. ಆದರೂ ಅವರು ಬೇಕಾಗಿರುತ್ತಾರೆ.

ಆತ್ಮೀಯತೆಯ ಒಂದು ತಾಣ ಮದುವೆಯದ್ದು. ಮನುಷ್ಯ ಎಲ್ಲಾ ಕಡೆ ಗೆದ್ದರೂ, ಸೋಲುವುದು ಅಥವಾ ಹಾಗೆ ಸೋತಂತೆ ನಟಿಸುವುದು ಅನಿವಾರ್ಯ ಅನ್ನಿಸುವುದು ಮದುವೆಯಲ್ಲೇ. ಸಿದ್ಧತೆ ಇಲ್ಲದೆ ಕಣ್ಣಿಳಿಯು ವುದು, ಸ್ಪಷ್ಟತೆ ಇಲ್ಲದೆ ಮದುವೆಯಾಗುವುದು ಎರಡೂ ಬಹಳ ಅಪಾಯಕಾರಿ!

ಮದುವೆ ಬಹಳ ಸರಳವೆನಿಸುವ ಜಟಿಲ ಗಂಟು. ಪಾರದರ್ಶಕ ಆಗಬೇಕೆಂದುಕೊಂಡಷ್ಟೂ ನಾಜೂಕು ಆಗಬಹುದಾದ ಸಾಧ್ಯತೆಗಳೇ ಜಾಸ್ತಿ. ಒಳವಿಮರ್ಶೆ ಒಬ್ಬರಲ್ಲಿ ನಡೆಯಬೇಕಾ ಅಥವಾ ಇಬ್ಬರಲ್ಲೂ ನಡೆಯಬೇಕಾ? ಮದುವೆ ಎಂಬ ಸಂಭ್ರಮ ಎಂಥವನನ್ನೂ ಜಾಣ ಮರೆವಿನತ್ತ ದೂಡುತ್ತದೆ. ಮಾನಸಿಕ ಮತ್ತು ದೈಹಿಕ ಸಂಬಂಧಗಳು ಎರಡಕ್ಕೂ ಬಹಳ ಮಹತ್ವವಿರುವುದ ರಿಂದ ಇಲ್ಲಿನ ಅಗತ್ಯತೆಗಳು ಎಲ್ಲ ಸಂಬಂಧಕ್ಕಿಂತ ವಿಭಿನ್ನ ಹಾಗೂ ಸಂದಿಗ್ಧ. 'ಇಗೋ' ಕಾಡುತ್ತದೆ. ಅತೀ ಎನಿಸುವ (ವಾಸ್ತವವಾಗಿ ಅಲ್ಲ) ಮಮತೆ ಎಲ್ಲೆಲ್ಲೋ ಕೊಂಡೊಯ್ಯುತ್ತದೆ. ಎಲ್ಲ ಆಗಿ ಕೊನೆಗೆ ಕತ್ತರಿ ಬೀಳುವುದು ಪ್ರೀತಿಗೇ.

ಮದುವೆ ಎಂಬ ಸಾಮಾಜಿಕ ಕಟ್ಟುಪಾಡು ಗಂಡ ಹೆಂಡತಿಯ ನಡುವೆ ಯಾವ ಮೂಲ ಬಂಧವನ್ನು ಹುಟ್ಟುಹಾಕುತ್ತದೋ, ಅದನ್ನು ಹುಡುಕುವುದು ಬಹಳ ಕಷ್ಟ. ಆದರೆ ಅಸಾಧ್ಯವಲ್ಲ.

ಮೊದಲ ದಿನ ಅಥವಾ ಮೊದಲ ಭೇಟಿಯಿಂದಲೇ ಪರಸ್ಪರ ದೈಹಿಕ ಬಾಂಧವ್ಯವಷ್ಟೇ ಮುಖ್ಯವಾದರೆ, ಅಂತಹ ಸಂಬಂಧಗಳಲ್ಲಿ ಪ್ರತೀ ಸಲ ಸಂಬಂಧದ ಉಳಿವಿಗೆ ಅದೇ ಅಗತ್ಯವಾಗಿ ಪರಿಣಮಿಸುತ್ತದೆ. ಆದರೆ ಆ 'ಮೂಲ' ಮಾತು, ಕೇಳಿಸಿಕೊಳ್ಳುವುದು ಮತ್ತಿತರ ಮೂಲದಿಂದ ಪ್ರಾರಂಭ ವಾದರೆ, ಅದರ ಅಗತ್ಯ ಸಂಯಮ, ಆಲೈಸುವಿಕೆ, ಆಸ್ಥೆ.. ಹೀಗೆ ಹತ್ತಾರು ಕಾರಣಗಳು ಅಗತ್ಯಕ್ಕೆ ತಕ್ಕಂತೆ ಸಿಗುತ್ತವೆ.

ಪ್ರೀತಿ ಬಡವವಾಗುವುದು, ನಾವು ನಮ್ಮ ಖಾಸಗಿ ಅಗತ್ಯಗಳನ್ನು ತಿಳಿದು ಕೊಳ್ಳಲು ಸೋಲುವುದರಿಂದ. ಕೆಲವೊಮ್ಮೆ ತಿಳಿದೂ ಅದನ್ನು ತೋರ್ಪಡಿಸಿ ಕೊಳ್ಳಲು ಜಿಪುಣರಾಗುವುದರಿಂದ. ಸೋಲಬೇಕು; ಆದರೆ ಗೆಲುವಿಗಾಗಿ ಸೋಲಬೇಕು. ಬಾಗಬೇಕು; ಯಾಕೆಂದರೆ ಹರಿದ ಮುತ್ತಿನ ಹಾರವ ಹೆಕ್ಕಿ ಮತ್ತೆ ಪೋಣಿಸಲು. ಹೀಗೆ ಸೋಲುವುದೂ ಮತ್ತು ಬಾಗುವುದಕ್ಕೂ ಅರ್ಥ ಇರಬೇಕು, ಸಾರ್ಥಕತೆಯಿರಬೇಕು ಅಷ್ಟೇ.

ಅಂದ ಹಾಗೆ ಮನುಷ್ಯರನ್ನು ಹೊರತು ಪಡಿಸಿದ, ಸಾಕು ಪ್ರಾಣಿಗಳ ಜತೆಗಿನ ನಮ್ಮ ಹೆಸರಿಲ್ಲದ ಸಂಬಂಧಕ್ಕೆ ಇದ್ಯಾವುದೂ ಲಾಗೂ ಆಗುವುದಿಲ್ಲವೆಂದು ಕಾಣುತ್ತದೆ; ಅಲ್ಲವೇ?



